**ಹೊರ ದೇಶಗಳಲ್ಲಿ ಪ್ರವಾಸಿಗರಿಗೆ ವಿದೇಶೀ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳ ಲಭ್ಯತೆ**

**ನವೆಂಬರ್ 13, 2001**

ಹೊರದೇಶಗಳಲ್ಲಿ ಪ್ರವಾಸ ಮಾಡುವವರಿಗಾಗಿ 2,000 ಅಮೆರಿಕಾ ಡಾಲರುಗಳು ಅಥವಾ ಅದಕ್ಕೆ ಸಮನಾದ ವಿದೇಶೀ ವಿನಿಮಯವನ್ನು ವಿದೇಶೀ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳ ರೂಪದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯಿಲ್ಲದೆ ಬಿಡುಗಡೆ ಮಾಡಲು ಈಗ ಅಧಿಕೃತ ವ್ಯಾಪಾರಿಗಳಿಗೆ ಮತ್ತು ಪೂರ್ಣ ಪ್ರಮಾಣದ ಹಣ ಪರಿವರ್ತನಕಾರರಿಗೆ ಅನುಮತಿ ನೀಡಲಾಗಿದೆ. ಕಾರ್ಯವಿಧಾನವನ್ನು ಸರಳಗೊಳಿಸುವ ದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಸೂಚನೆಗಳಿಗೆ ತಿದ್ದುಪಡಿ ತಂದಿದೆ. ವಿದೇಶೀ ಪ್ರವಾಸಿಗರಿಗೆ ವಿದೇಶೀ ಕರೆನ್ಸಿ ನೋಟುಗಳು ಮತ್ತು ನಾಣ್ಯಗಳ ರೂಪದಲ್ಲಿ ವಿದೇಶೀ ವಿನಿಮಯವನ್ನು ಬಿಡುಗಡೆ ಮಾಡಲು ಈಗಿರುವ ಮಿತಿ 500 ಅಮೇರಿಕಾ ಡಾಲರುಗಳು.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.:2001–2002/577